ಕ್ರ.ಸಂ:ಬಿ2/ಜಿಎಫ್ಎಲ್/ಕ್ವಾರಿ/ಸಿ.ಆರ್-16/2021-22

ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕೆನರಾ ವೃತ್ತ, ಶಿರಸಿ.
ದಿನಾಂಕ:05-09-2022.

ಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ) ನೋಡೆಲ್ ಅಧಿಕಾರಿ, (ಅಸಂಕಾ)
ಬೆಂಗಳೂರು-03

ಮಾನ್ಯರೆ,

ವಿಷಯ: Diversion of 1.97 ha of forest land in Khurse village sy no 61, Sampakhanda Hobli, Sirsi Taluk, Uttara Kannada District (Sirsi Forest Division) for Building Stone Quarry and its Approach Road in favour of M/s Shrinidhi Stone Crusher, 57/2, Manjuguni village, Sirsi Taluk, Uttara Kannada District.
**Proposal No: FP/KA/QRY/35030/2018 (FORM A)**

ಉಲ್ಲೇಖ:1 ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಸಂ) ಹಾಗೂ ನೋಡಲ್ ಅಧಿಕಾರಿ (ಅಸಂಕಾ), ಬೆಂಗಳೂರು ರವರ ಪತ್ರ ಸಂಖ್ಯೆ: A5(2) GFL. CR-04/2020-21 ದಿನಾಂಕ: 28-06-2021.

2 ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ ಶಿರಸಿ ರವರ ಪತ್ರ ಸಂಖ್ಯೆ:ಎ3/ಭೂಮಿ/ಶ್ರೀನಿಧಿಸ್ಟೋನ್/2022-23/1281 ದಿನಾಂಕ:24-08-20222

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶಿರಸಿ ವಿಭಾಗದ ಶಿರಸಿ ತಾಲೂಕ ಸಂಪಖಂಡ ಹೋಬಳಿಯ ಖುರ್ಸೆ ಅ.ಸ.ನಂ. 61 ರಲ್ಲಿರುವ ಶ್ರೀನಿಧಿ ಸ್ಟೋನ್ ಕಲ್ಲುಕ್ವಾರಿ ಸ್ಥಳದ ವಸ್ತುಸ್ಥಿತಿ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಆಗಿದೆಯೇ ಎನ್ನುವ ಕುರಿತು ವರದಿ ಸಲ್ಲಿಸಲು ಉಲ್ಲೇಖಿತ (1) ರ ಪತ್ರದಲ್ಲಿ ಸೂಚಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ರವರ ವರದಿಯಲ್ಲಿ ಸದರಿ ಪ್ರಸ್ತಾಪಿಸಿದ ಜಾಗವು ಖುರ್ಸೆ ಗ್ರಾಮದ ಅ.ಸ.ನಂ. 61 ರ ವ್ಯಾಪ್ತಿಗೆ ಒಳಪಟ್ಟಿರುವುದು ಗ್ರಾಮ ನಕಾಶೆ ಆಧಾರದಿಂದ ಕಂಡು ಬಂದಿರುತ್ತದೆ. ಸದರಿ ಪ್ರಸ್ತಾವನೆಯಲ್ಲಿರುವ ಮಾಹಿತಿ ಆಧಾರದಿಂದ N14 33.532 E074 40.728 ಜಿ.ಪಿ.ಎಸ್. ರೀಡಿಂಗ್ ಗಳನ್ನು ಪರಿಶೀಲಿಸಿ ಗೇಣಿಗೆ ಕೋರಿದ ಜಾಗವನ್ನು ಖಾತ್ರಿಪಡಿಸಿಕೊಳ್ಳಲಾಗಿರುತ್ತದೆ. ಗೇಣಿಗೆ ಕೋರಿದ ಜಾಗವು ಒಟ್ಟು 1.97 ಹೆ ವಿಸ್ತೀರ್ಣವಿದ್ದು, ಅದರಲ್ಲಿ 1.7 ಹೆ ಕ್ವಾರೆಗೆ, 0.27 ಹೆ ರಸ್ತೆಗೆ ಕೋರಿರುವುದು ನಿಜವಿರುತ್ತದೆ. ಆದರೆ ಸದರಿ ಗೇಣಿಗೆ ಕೋರಿದ ಜಾಗವು 2020-21 ನೇ ಸಾಲಿನಲ್ಲಿ ಆಕೇಶಿಯಾ ಅಂತಿಮ ಕಟಾವಣೆ ಮಾಡಿ ಎ.ಅರ್. ಮಾದರಿಯ ಮುಂಗಡ ಕಾಮಗಾರಿಯಾದ ಜಾಗವಾಗಿದ್ದು, ಅದರಲ್ಲಿ ಈಗಾಗಲೇ ಒಟ್ಟು 1.97 ಹೆ ಕ್ಷೇತ್ರದಲ್ಲಿ 3152 ಗುಂಡಿಗಳನ್ನು ತಗೆಯಲಾಗಿರುತ್ತದೆ. ಮತ್ತು ಸದರಿ ಜಾಗದಲ್ಲಿ 2021 ನೇ ಮಳೆಗಾಲದಲ್ಲಿ ಗಿಡಗಳನ್ನು ನೆಟ್ಟು ಅಕೇಶಿಯಾ ನೆಡುತೋಪು ರಚಿಸಿದ್ದು ಇರುತ್ತದೆ. ಪ್ರಸ್ತಾಪಿತ ಸ್ಥಳದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲ ಹಾಗೂ ಯಾವುದೇ ಅರಣ್ಯೇತರ ಚಟುವಟಿಕೆಗಳು ಕಂಡುಬರುವುದಿಲ್ಲ. ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಾನ್ಮನೆರವರ ವರದಿಯಲ್ಲಿ ತಿಳಿಸಿರುತ್ತಾರೆ.

ಅದರಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ರವರು ದಿನಾಂಕ: 23-08-2022 ರಂದು ಸ್ಥಳ ಪರಿಶೀಲಿಸಿದ್ದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಾನ್ಮನೆಯವರ ವರದಿಯು ನಿಜವಿದ್ದು ಪ್ರಸ್ತಾಪಿತ ಸ್ಥಳದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲ. ಹಾಗೂ ಅರಣ್ಯೇತರ ಚಟುವಟಿಕೆಗಳು ಕಂಡು ಬರುವುದಿಲ್ಲವೆಂದು ಉಲ್ಲೇಖಿತ (2) ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ ಇವರ ವರದಿ ಹಾಗೂ ಅಡಕವನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ನಿರ್ದೇಶನಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

05/09

ಅರಣ್ಯ ಸಂರಕ್ಷಣಾಧಿಕಾರಿ,
ಕೆನರಾ ವೃತ್ತ, ಶಿರಸಿ.

1. ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ ರವರಿಗೆ ಮಾಹಿತಿಗಾಗಿ.
2. ಪ್ರತಿಯನ್ನು ಶ್ರೀನಿಧಿ ಸ್ಟೋನ್ ಕ್ರಶರ್, 57/2, ಮಂಜುಗುಣಿ ಗ್ರಾಮ , ಶಿರಸಿ ತಾಲೂಕು ಉತ್ತರ ಕನ್ನಡ ರವರಿಗೆ ಮಾಹಿತಿಗಾಗಿ.

ರವಾನಿಸಿದ ತಾರೀಖು 05/09/22
ಸಹಿ: